ಆರ್.ವಿ. ಹಿರೇಮಠ, ಧಾರವಾಡ

*ಕೆಲವರೇಕೆ ಯಾವಾಗಲೂ ಮುಖ ಗಂಟಿಕ್ಕಿಕೊಂಡಿರುತ್ತಾರೆ?*




ಇಟ್ಟುಕೊಳ್ಳಲಿ ಬಿಡಿ, ಟ್ಯಾಕ್ಸ್‌ಫ್ರೀಯಾಗಿ ಇಟ್ಟುಕೊಳ್ಳಲು ಸಾಧ್ಯವಾದ ಗಂಟು ಅದೊಂದೇ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಹೆಣ್ಣು ಮಕ್ಕಳನ್ನು ಹೆರುತ್ತಾಳೆ, ಗಂಡು ಹೆಗಲ ಮೇಲೆ ಹೊರುತ್ತಾನೆ. ಹೆರುವುದು ಭಾರವೋ, ಹೊರುವುದು ಭಾರವೋ?*

ಹೊತ್ತ ಗಂಡು ಮಗುವನ್ನು ಬೇಕೆನಿಸಿದಾಗ ಇಳಿಸಬಹುದು, ಆದರೆ ತಾಯಿ? ಜಗದ ಮಾತೆಯರಿಗಿದೋ ನಮನ.

ಅರಕೆರೆ ಪಿ. ಸುರೇಶ್, ಭದ್ರಾವತಿ

*ಜಾಹೀರಾತಿಲ್ಲದೆ ಮಾರಾಟವಾಗುವ ವಸ್ತು ಯಾವುದು?*




ಮೀನು ಮತ್ತು ಬೆಳ್ಳುಳ್ಳಿ. ಅವುಗಳಿಗೆ ಜಾಹೀರಾತೇ ಬೇಕಿಲ್ಲ, ಸ್ವಂತ ವಾಸನೆಯೇ ಸಾಕು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ದುಷ್ಟರನ್ನು ಕಂಡರೆ ದೂರವಿರಬೇಕಂತೆ; ಆದರೆ, ಹುಡುಗಿಯರನ್ನು ಕಂಡರೆ ಏನು ಮಾಡಬೇಕು?*

ನನ್ನಿಂದ ದೂರವಿರಿ ಎಂದು ಅವರಿಗೆ ನಿರ್ದಿಷ್ಟವಾಗಿ ಹೇಳಿಬಿಡಿ!

ಎಂ.ಎಸ್. ಸೋಮಶೇಖರ್, ಮೈಸೂರು

*ಪ್ರಳಯವಾದಾಗ ಶ್ರೀರಂಗಪಟ್ಟಣದಲ್ಲಿರುವ ಶ್ರೀರಂಗನಾಥಸ್ವಾಮಿ ಮೇಲಕ್ಕೆ ಏಳುವರಂತೆ. ಎದ್ದು ಏನು ಕಾರ್ಯ ಮಾಡುವರು?*

ಬೇರೆಡೆಗೆ ಹೋಗಿ ಮಲಗುವರು!

ಕಂಡಕ್ಟರ್ ರಾಜು, ಗುಬ್ಬಿ

*ಹೆಣ್ಣು, ಹೊನ್ನು, ಮಣ್ಣು ಒಲಿಯಲು ಅದೃಷ್ಟವಿರಬೇಕಾ?*

ಭಂಡತನವಿದ್ದರೆ ಸಾಕು.

ಎಚ್. ಆರ್. ದೇಸಾಯಿ, ರಾಯಚೂರು

*ವೇದವ್ಯಾಸರು ಮಹಾಭಾರತದಲ್ಲಿ ಸೃಷ್ಟಿಸಿದ ಒಟ್ಟು ಪಾತ್ರಗಳು ಎಷ್ಟು?*

ಕುರುಕ್ಷೇತ್ರದ ರಣರಂಗ ಎಷ್ಟು ಹಿಡಿಸುತ್ತದೋ ಅಷ್ಟು!

ವಿ. ಹಮೀದ್, ವಿಟ್ಲ

*ಲವ್ ಮಾಡುವಾಗ ಇರುವ ಕಾಳಜಿ ಮ್ಯಾರೇಜ್ ನಂತರ ಇರುವುದಿಲ್ಲವೇಕೆ?*

ಲವ್ ಈಸ್ ಬ್ಲೈಂಡ್, ಮ್ಯಾರೇಜ್ ಈಸ್ ಎನ್ ಐ ಓಪನರ್ ಆದ್ದರಿಂದ!

ಎಸ್. ಪ್ರಕಾಶ್, ದೇವನಹಳ್ಳಿ

*ಬುದ್ಧಿಜೀವಿಗಳು ಎನ್ನಿಸಿಕೊಳ್ಳಬೇಕಾದರೆ ಏನು ಅರ್ಹತೆ ಹೊಂದಿರಬೇಕು?*

ಸಂಪ್ರದಾಯಗಳನ್ನು, ದೇವನನ್ನು ಬಾಯಿಗೆ ಬಂದಂತೆ ಜರೆಯುವುದನ್ನು ಕಲಿಯಬೇಕು; ಬೆಳೆದರೆ ಗಡ್ಡ ಬಿಡಬೇಕು!

ಸೋಮಶೇಖರ್, ಮಿರ್ಲೆ

*ಚಿನ್ನವನ್ನು ಬೀದಿಯಲ್ಲಿ ಮಾರುತ್ತಿದ್ದ ನಾಡಿನಲ್ಲಿ ಈಗ ರಾಜಕಾರಣಿಗಳನ್ನು ಮಾರುತ್ತಿದ್ದಾರಲ್ಲಾ ಗುರುವೇ?*

ಎಂತಹ ಹೋಲಿಕೆಯೋ ಶಿಷ್ಯಾ; ಅಂದಿನದು ಬಂಗಾರ, ಇಂದಿನದು ಕಾಗೆಬಂಗಾರ!

ಎಚ್. ಆನಂದಕುಮಾರ್, ಚಿತ್ರದುರ್ಗ

*ಇದುವರೆಗೆ ಎಷ್ಟು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೀರಿ ಮತ್ತು ಎಷ್ಟು ಪ್ರಶ್ನೆಗಳನ್ನು ಕಸದ ಬುಟ್ಟಿಗೆ ಎಸೆದಿದ್ದೀರಿ?*

ಅಂಕಣಕ್ಕೆ ಹಿಡಿಸಿದಷ್ಟೂ ಉತ್ತರಿಸಿದ್ದೇನೆ, ಬುಟ್ಟಿಗೆ ಹಿಡಿಸಿದಷ್ಟೂ ಎಸೆದಿದ್ದೇನೆ.

ಪಿ.ವಿ. ಆಚಾರ್ಯ, ಹೆಬ್ಬಾಳ

*ಹುಯಿಲುಗೋಳರ ಪದ್ಯವನ್ನು ಈಗ ಉದಯವಾಗಲಿ ನಮ್ಮ ಕಳ್ಳಕಾಕರ ಬೀಡು ಎಂದು ಬದಲಾಯಿಸಿ ಹಾಡಬಹುದಲ್ಲವೇ?*

ಹುಯಿಲುಗೋಳರ ಕ್ಷಮೆ ಕೇಳಿ ಉದಯವಾಯಿತು ನಮ್ಮ...... ಎಂದು ಗೋಳಾಡುತ್ತಾ ಹುಯಿಲಿಡುವುದು ಇನ್ನೂ ಹೆಚ್ಚು ಸಮಂಜಸವಾದೀತು!

## ಬಹುಮಾನಿತ ಪ್ರಶ್ನೆ

ವೀರೇಂದ್ರ ಎಂ. ಮೇಗೂರ್, ಧಾರವಾಡ

*ಗಿಣಿ ಕಚ್ಚಿದ ಹಣ್ಣಿಗೂ, ಪ್ರೇಯಸಿ ಎಂಜಲು ಮಾಡಿದ ಟೀಗೂ ಏನು ವ್ಯತ್ಯಾಸ?*

ಅದರಲ್ಲಿ ಹಣ್ಣಿನ ವಾಸನೆಯೇ ಇರುತ್ತದೆ, ಇದರಲ್ಲಿ ಲಿಪ್‌ಸ್ಟಿಕ್ ವಾಸನೆ ಇರುತ್ತದೆ!

ಎಸ್.ಜಿ. ಕರನಂದಿ, ಹುನಗುಂದ

*ದೊಂಬರಾಟಕ್ಕೂ, ರಾಜಕೀಯದ ಆಟಕ್ಕೂ ವ್ಯತ್ಯಾಸ ಇದೆಯೇ?*

ದೊಂಬರಾಟದವರಿಗೆ ನಾಚಿಕೆ, ಮಾನ, ಮರ್ಯಾದೆಗಳು ಇರುತ್ತವೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಸಾಕುತಾಯಿ ಹೆಚ್ಚಿನವಳೋ, ಹೆತ್ತ ತಾಯಿ ಹೆಚ್ಚಿನವಳೋ?*

ಹೋಲಿಸುವುದೇ ತಪ್ಪಾದೀತು; ಒಬ್ಬಳಿಂದ ಜೀವ, ಮತ್ತೊಬ್ಬಳಿಂದ ಜೀವನ!

ಹಾಡ್ಯ ಜಯಾನಂದ, ಮೈಸೂರು

*ಹುಲ್ಲು ತಿಂದು ಹಾಲು ಕೊಡುತ್ತದೆ ಆಕಳು. ಓಟು ಪಡೆದ ರಾಜಕಾರಣಿ?*



Full ತಿಂದು ಹಾಳುಗೆಡವುತ್ತಾನೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*2010ರ ವರ್ಷದ ವ್ಯಕ್ತಿ ಎಂದು ನಿಮ್ಮನ್ನು ಆಯ್ಕೆ ಮಾಡಿದ್ದೇನೆ. ಸಂತೋಷ ತಾನೇ?*

ಹೌದೇ? ಗುಟ್ಟಾಗಿ ಹೇಳಿಬಿಡಿ, ಇದಕ್ಕೆ ನಾನು ಎಷ್ಟು ಹಣ ಕೊಡಬೇಕು?

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

*ಕಳ್ಳನಿಗೆ ಬೆಳದಿಂಗಳು ಸೇರುವುದಿಲ್ಲ, ರೋಗಿಗೆ ಹಾಲು ಸೇರುವುದಿಲ್ಲ; ರಾಜಕಾರಣಿಗಳಿಗೆ?*

ಅವರಿಗೂ ಅಷ್ಟೆ, (ಅಸೆಂಬ್ಲಿ ಮತ್ತು ಪಾರ್ಲಿಮೆಂಟ್) ಹಾಲು ಸೇರುವುದಿಲ್ಲ!

■ ರಾಮ್